ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಸಾಮಾನ್ಯವಾಗಿ ಸಿಂಗಲ್ ಟೀಚರ್ ಸ್ಕೂಲ್ಸ್‌ನ್ನು ಡೆಪ್ಯೂಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್‌ರವರು ಇನ್‌ಸ್ಪೆಕ್ಟ್ ಮಾಡುತ್ತಾರೆ. ಅವರು ೨-೩ ಸಲ ಇನ್‌ಸ್ಪೆಕ್ಟ್ ಮಾಡಿದ್ದಾರೆ. ೧೧-೧-೬೮ ಮತ್ತು ೬-೩-೬೯ರಲ್ಲಿ ತನಿಖೆ ಮಾಡಿದ್ದಾರೆ.

ಶ್ರೀ ಜಿ. ರಾಮೇಗೌಡ.—ಎಇಒ ಹೆಡ್‌ಕ್ವಾರ್ಟರ್ಸ್ ದೊಡ್ಡಬಳ್ಳಾಪುರ ಅವರು ಮೂರು ವರ್ಷಗಳಿಂದ ಒಂದು ಸಲ ಕೂಡ ಹೋಗಿ ತನಿಖೆ ಮಾಡಿಲ್ಲ. ಅವರನ್ನು ಅಲ್ಲಿಂದ ಮೂರು ಸಲ ಟ್ರಾನ್ಸ್‌ಫರ್ ಮಾಡಲಾಗಿತ್ತು. ಮೂರು ಸಲವೂ ಕ್ಯಾನ್ಸಲ್ ಆಗಿ ಅವರು ಅಲ್ಲಿಯೇ ಇದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ —ಸಾಮಾನ್ಯವಾಗಿ ಸಿಂಗಲ್ ಟೀಚರ್ ಸ್ಕೂಲ್ಸ್‌ನ್ನು ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್‌ರವರು ಇನ್‌ಸ್ಪೆಕ್ಟ್ ಮಾಡುತ್ತಾರೆ. ೨-೩ ಸಲ ಆ ಸ್ಕೂಲನ್ನು ಇನ್‌ಸ್ಪೆಕ್ಷನ್ ಮಾಡಿದ್ದಾರೆ ಡಿ.ಇ.ಓ.ರವರು ಹೈಸ್ಕೂಲ್ಸ್ ಮತ್ತು ಹೈಯರ್ ಸೆಕೆಂಡರಿ ಸ್ಕೂಲ್ಸ್‌ನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆ.

ಶ್ರೀ ಅಜೀಜ್ ಸೇಟ್.—ಅನೇಕ ಕಾರಣಗಳಿಗಾಗಿ ಸ್ಕೂಲುಗಳು ಕ್ಲೋಸ್ ಆಗಿವೆ, ಮೊನ್ನೆ ಚಿತ್ರದುರ್ಗದಲ್ಲಿ ಇದೇ ರೀತಿ ಆದದ್ದನ್ನು ಹೇಳಿದರು. ಇದೇ ರೀತಿ ಪಟ್ಟಣದಲ್ಲಿ, ಹಳ್ಳಿಯಲ್ಲಿ, ತಾಲ್ಲೂಕಿನಲ್ಲಿ ಉಪಾಧ್ಯಾಯರ ಗಳು ಹೆಗ್ಗಣಗಳಾಗಿ ರಾಜಕೀಯದಲ್ಲಿ ಭಾಗದಾರರಾಗಿದ್ದಾರೆ. ಇದಕ್ಕೆ ಕಾರಣ ಅವರು ಒಂದೇ ಊರಿನಲ್ಲಿ ೧೫-೨೦ ವರ್ಷಗಳಿಂದ ಇರುವುದು ಅಂತ ಅನ್ನುವುದು ತಮಗೆ ಗೊತ್ತಾಗುವುದಿಲ್ಲವೇ? ನಮ್ಮ ಮೈಸೂರು ಸಿಟಿಯಲ್ಲಿ ಎರಡು ಕುಟುಂಬದವರು ೧೬ ಜನ ಡಿ ಇ ಓ ಆಫೀಸು ಮತ್ತು ಸ್ಕೂಲುಗಳಲ್ಲಿ ಇದ್ದಾರೆ, ವೈಫು, ಮದರ್-ಇನ್-ಲಾ, ಸಿಸ್ಟರು, ಸಿಸ್ಟರ್ ಇನ್‌ಲಾ, ಬ್ರದರ್, ಬ್ರದರ್-ಇನ್-ಲಾ ಈ ರೀತಿ ಒಂದು ಎಂಜಿನ್ ನೂರಾರು ಡಬ್ಬಿಗಳನ್ನು ಇಟ್ಟುಕೊಂಡು ವಿದ್ಯಾಭ್ಯಾಸದ ಇಲಾಖೆಯನ್ನು ನಡೆಸುತ್ತಿರುವುದು ಸರಿಯೇ? ಇದು ತಮಗೆ ಗೊತ್ತಿಲ್ಲವೇ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಮಾನ್ಯ ಸದಸ್ಯರು ಹೇಳಿದಂತಹ ಪರಿಸ್ಥಿತಿ ಯಾವುದೂ ಇಲ್ಲ. ಡಿ ಇ ಒ ರವರು ಇಡೀ ಜಿಲ್ಲೆಯ ವಿದ್ಯಾಧಿಕಾರಿಗಳಾಗಿದ್ದಾರೆ. ಇಡೀ ಜಿಲ್ಲೆಯಲ್ಲಿ ಸಾವಿರಗಟ್ಟಲೆ ಶಾಲೆಗಳು ಇರುತ್ತವೆ. ಪ್ರತಿಯೊಂದನ್ನೂ ಅವರೇ ಇನ್‌ಸ್ಪೆಕ್ಟ್ ಮಾಡಬೇಕೆಂದರೆ ಆಗದ ಮಾತು. ಆದ್ದರಿಂದ ಡೆಪ್ಯೂಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಇರುತ್ತಾರೆ. ಅವರು ಸಿಂಗಲ್ ಟೀಚರ್ ಸ್ಕೂಲ್ಸ್‌ನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆ. ಆ ರೀತಿ ಅವರು ಮಾಡಿದ್ದಾರೆ. ಇದರ ಜೊತೆಗೆ ಊರಿನ ಜನರೂ ಸಹ ಸಹಕಾರ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಉಪಾಧ್ಯಾಯರೇ ಇಲ್ಲದ ಸ್ಕೂಲುಗಳನ್ನು ತೆಗೆಯುವ ಯೋಜನೆ ಸರ್ಕಾರದವರಿಗೆ ಏನಾದರೂ ಇದೆಯೇ? (ನಗು)

ಶ್ರೀ ಎನ್, ಎಂ. ಕೊಟ್ರಬಸಯ್ಯಸೋಗಿ.—ಅಂತಹ ಯೋಜನೆ ಯಾವುದೂ ಇಲ್ಲ.

EDUCATED UNEMPLOYED GIRLS IN K.G.F.

528. SRI S. R. SHANMUGAM (K.G.F.).—

Will the Minister for Law, Labour and Parliamentary Affairs be pleaesd to state.—

(a) whether the Government is aware that thousands of educated unemployed young girls are available in Kolar Gold Fields for employment:

(b) whether the Government has considered any proposal to provide employment opportunities for them in different units like electricity, radio mechanic, tailoring, typewriting, telephone and at the Industrial Training Centre at Kolar Gold Fields?

SRI K. PUTTASWAMY (Minister for Law, Labour and Parliamentary Affairs:—

(a) No survey has been made of the exact number of educated unemployed women in Kolar Gold Fields. However the total number of educated women applicants of Kolar District seeking employment assistance from the Employment Exchange, K.G.F. as on 31st December 1963 is 939.

(b) The Industrial Training Institute is a training institute, and imparts skills to the trainees which in turn helps them to get employment. Attempts are made to impart training in such skills as are currently in demand.

ಶ್ರೀ ಎಸ್. ಆರ್. ಪಣ್ಣಂಗಂ.–ಕೆ.ಜಿ.ಎಫ್‌ನಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ ಇದೆ. ಅದರಲ್ಲಿ ಎಸ್‌ಎಸ್‌ಎಲ್‌ಸಿ ಪಾಸ್ ಆದವರು ಮತ್ತು ಫೇಲ್ ಆದ ಯುವಕರಿಗೆ ಟ್ರೈನಿಂಗ್ ಕೊಡುತ್ತೀರಿ. ೯೩೯ ಜನ ಹೆಣ್ಣು ಮಕ್ಕಳು ಕೆ ಜಿ ಎಫ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಕೆಲಸಕ್ಕಾಗಿ ರಿಜಿಸ್ಟರ್ ಮಾಡಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ಈ ಟ್ರೈನಿಂಗ್ ಸೆಂಟರ್‌ನಲ್ಲಿ ಹೆಣ್ಣು ಮಕ್ಕಳಿಗೆ ಎಲೆಕ್ಟ್ರಿಕಲ್ ರೇಡಿಯೋ, ಮೆಕ್ಯಾನಿಕ್ಸ್, ಟೈಲರಿಂಗ್, ಟೈಪ್‌ರೈಟಿಂಗ್ ಮತ್ತು ಟೆಲಿಫೋನ್ ಆಪರೇಟರ್ ಟ್ರೈನಿಂಗ್ ಕೊಡುವುದಕ್ಕೆ ಏನಾದರೂ ಅಕ್ಷೇಪಣೆ ಇದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಹೆಣ್ಣು ಮಕ್ಕಳಿಗೆ ಕುಶಲ ಕಲೆಗಳಲ್ಲಿ ತರಬೇತು ಕೊಡಲು ಕೆಜಿಎಫ್‌ನಲ್ಲಿ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರು ಅಪೇಕ್ಷೆ ಪಡುತ್ತಾರೆ. ಈಗ ಕೋಲಾರ ಜಿಲ್ಲೆಯ ಗೋರಿಬಿದನೂರಿನಲ್ಲಿ ಅದಕ್ಕೆ ಅವಕಾಶ ಇದೆ. ಸೈನೋಗ್ರಫಿ ಹೆಣ್ಣು ಮಕ್ಕಳಿಗೆ ಕಲಿಸುತ್ತಾ ಇದ್ದಾರೆ, ಸುಮಾರು ೯೦ ಜನ ಹೆಣ್ಣುಮಕ್ಕಳು ಈಗ ಕಲಿಯುತ್ತಾ ಇದ್ದಾರೆ.

SRI A. R. BADARINARAYAN.—In answer to (b) it is stated that attempts are made to impart training in such skills as are currently in demand. The question seems to show the necessity of thousands of educated unemployed girls wanting to have employment. What percentage of the unemployed young girls are being given training in such skills ?

SRI K. PUTTASWAMY.—I am unable to say what percentage it represents. I have already submited to the House that about 90 girls are receiving training at Gowribidanur in Kolar District.

SRI BADARINARAYAN.—How does it solve the problem of thousands of educated unemployed girls ?

SRI K. PUTTASWAMY.–That is only an attempt to solve the problem.

1-30 P. M.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :— ಕೆ ಜಿ ಎಫ್ ನಲ್ಲಿ ಶೇಕಡ ೭೫ ರಷ್ಟು ಮಂದಿ ಷೆಡ್ಯೂಲ್ಡ್ ಕ್ಯಾಸ್ಟಿನವರು ಮತ್ತು ಟ್ರೈಬ್ಸ್‌ನವರಿದ್ದಾರೆ. ಅಲ್ಲಿ ಅವರಲ್ಲಿ ಸಾವಿರಾರು ನಿರುದ್ಯೋಗಿ ಹುಡುಗಿಯರಿದ್ದಾರೆ. ಗೋರಿಬಿದನೂರಿನಲ್ಲಿ ಟ್ರೈನಿಂಗ್‌ಗೆ ಅವಕಾಶವಿದೆ ಎಂದು ಹೇಳುತ್ತಿದ್ದೀರಿ. ಕೆ ಜಿ ಎಫ್ ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನ ಹೆಣ್ಣುಮಕ್ಕಳಿಗೆ ತರಬೇತಿ ಕೊಡುವುದಕ್ಕಾದರೂ ಇಂಥ ಒಂದು ಟ್ರೈನಿಂಗ್ ಸಂಸ್ಥೆ ತೆರೆದು ನಿರುದ್ಯೋಗವನ್ನು ಕಡಮೆಮಾಡಲು ಪ್ರಯತ್ನ ಮಾಡುವಿರಾ?

SRI. K PUTTASWAMY :— I do not agree with the hon. members presumption that all these 939 girls belong to Scheduled caste and Scheduled Tribes. These girls are from the entire district and according to my estmate about 1/3rd of these girls may be from K. G. F. and some percentage may belong to Scheduled Castes and Scheduled Tribes. The facility for giving training to girls is not available in all the districts. Kolar distirict is fortunate in having such a training centre at Gowribidnur and only willing girls may join the training courses. Even in the Industrial Training Institute girls are not prohibited from seeking admission.

ಶ್ರೀ ಎಸ್. ಆರ್ ಷಣ್ಮುಗಂ :— ಗೋರಿಬಿದನೂರಿನಲ್ಲೇನು ಟ್ರೈನಿಂಗ್ ಕೊಡುವಿರೋ ಅದೇ ರೀತಿ ಕೆ ಜಿ ಎಫ್ ನಲ್ಲೂ ಕೊಡಲು ಆಕ್ಷೇಪವೇನು?

ಶ್ರೀ ಕೆ. ಪುಟ್ಟಸ್ವಾಮಿ :— ಆಕ್ಷೇಪವೇನೂ ಇಲ್ಲ, ವಿಚಾರ ಮಾಡಬಹುದು.

ಶ್ರೀ ಬಿ. ಪಿ. ಗಂಗಾಧರ್:— ಇಡೀ ರಾಜ್ಯದಲ್ಲಿ ಟೈಲರಿಂಗ್ ಕಲಿಯಲು ಹೆಣ್ಣುಮಕ್ಕಳಿಗೆ ಅನುಕೂಲ ಮಾಡುವುದು ಒಳ್ಳೆಯದು. ಆದುದರಿಂದ ಒಂದೊಂದು ಜಿಲ್ಲೆಯಲ್ಲಿ ೨೦೦-೩೦೦ ಜನರು ಕಲಿಯಲು ಅವಕಾಶ ಕಲ್ಪಿಸುವುದನ್ನು ತೀವ್ರವಾಗಿ ಯೋಚನೆಮಾಡುತ್ತೀರಾ?

SRI K PUTTASWAMY :— That is matter for consideration.

ಶ್ರೀಮತಿ ಲೀಲಾವತಿ ರೈ :— ದಕ್ಷಿಣಕನ್ನಡ ಜಿಲ್ಲೆಯಲ್ಲೂ ಇದೇ ರೀತಿಯ ಐ ಟಿ ಐ ಇದೆ. ಅದರ ಬಗ್ಗೆ ಸಾರ್ವಜನಿಕರು ಮತ್ತು ಸದಸ್ಯರು ಮನವಿಮಾಡಿದ್ದಾರೆ. ಅಲ್ಲೂ ಟೈಲರಿಂಗ್ ಇರಬೇಕು, ಬಹಳ ಅಗತ್ಯ, ಅದು ಎಸ್ ಎಸ್ ಎಲ್ ಸಿ ಆಗದಿರುವವರಿಗೆ ಅನುಕೂಲ ಎಂದು ತಿಳಿಸಿರುವ ವಿಚಾರದಲ್ಲೇನು ಮಾಡಿದೆ? ಮಂಗಳೂರಿನಲ್ಲೂ ಟೈಲರಿಂಗ್ ಕಲಿಯಲು ಅನುಕೂಲ ಮಾಡುವಿರಾ?

SRI K. PUTTASWAMY :— That matter is under the active consideration of the Government.

ಶ್ರೀ ಕೆ ಎಂ ತಮ್ಮಯ್ಯ :— ಮಿನಿಸ್ಟೀರಿಯಲ್ ಕೆಲಸಗಳಿಗೆ ಹೆಣ್ಣುಮಕ್ಕಳು ಜಾಸ್ತಿಯಾಗಿ ಬರುತ್ತಿರುವುದರಿಂದ ಗಂಡಸರಿಗೆ ತೊಂದರೆಯಾಗಿದೆ. ಆದ್ದರಿಂದ ಗಂಡಸರಿಗೇ ಬೇರೆ ಏರ್ಪಾಡು ಮಾಡುವಿರಾ?

SRI K. PTTASWAMY ;— The hon. Member seems to be very much frightened about ladies.

ಶ್ರೀ ಅಜೀಜ್ ಸೇಟ್ :— ಹೆಣ್ಣುಮಕ್ಕಳೂ ಶೇಕಡ ೫೨ ರಷ್ಟಿದ್ದಾರೆ. ಆದ್ದರಿಂದ ಅವರನ್ನು ವೀಕರ್ ಸೆಕ್ಷನ್ ಎಂದು ಹೇಳುವುದಕ್ಕಾಗುವುದಿಲ್ಲ. ಇಂದು ಹೆಣ್ಣುಮಕ್ಕಳು ಇಂಥ ಸಭೆಗಳಲ್ಲಿ ಸದಸ್ಯರಾಗಿದ್ದಾರೆ. ಮತ್ತು ಪ್ರೈಂ ಮಿನಿಸ್ಟರಾಗಿದ್ದಾರೆ. ಹಾಗಿರುವಾಗ ಅವರು ವೀಕರ್ ಸೆಕ್ಷನ್ ಎಂದು ಭಾವಿಸುವುದು ಹೇಗೆ?

MR. DEPUTY SPEAKER :— That Supplementary does not arise